UASB Library
Newspaper Clippings
Thursday 14-07-2022 Pg .1
Jai Kisan

ಡ್ರ್ಯಾಗನ್ ಫ್ರೂಟ್ ಬೆಳೆಗೆ ಆದ್ಯತೆ ನೀಡಿ

ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಡಾ. ಅಭಿಲಕ್ಷ ಲಿಖಿ ಸಲಹೆ

■ ವಿಜಯವಾಣಿ ಸುದ್ದಿಜಾಲ ಚಿಕ್ಕಬಳ್ಳಾಪುರ

ತಾಲೂಕಿನ ಮರಳುಕುಂಟೆಯಲ್ಲಿನ ರೈತ ನಾರಾಯಣ ಸ್ವಾಮಿಯ ಡ್ರ್ಯಾಗನ್ ಫ್ರೂಟ್ ತೋಟಕ್ಕೆ ಬುಧವಾರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಡಾ. ಅಭಿಲಕ್ಷ ಲಿಖಿ ಭೇಟಿ ನೀಡಿ ವೀಕ್ಷಿಸಿದರು.

ಹೈನುಗಾರಿಕೆ, ರೇಷ್ಮೆ, ತೋಟಗಾರಿಕೆ, ಕೃಷಿಗೆ ಹೆಸರುವಾಸಿಯಾಗಿರುವ ಜಿಲ್ಲೆಯಲ್ಲಿ ಇತ್ತೀಚೆಗೆ ಡ್ರ್ಯಾಗನ್ ಫ್ರೂಟ್ ಬೆಳೆಯುವಲ್ಲಿ ರೈತರು ಹೆಚ್ಚಿನ ಒಲವು ವ್ಯಕ್ತಪಡಿಸುತ್ತಿದ್ದಾರೆ. ಉತ್ತಮ ಇಳುವರಿ ಪಡೆಯುವ ಮೂಲಕ ಎಲ್ಲರ ಗಮನ ಸೆಳೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಡಾ. ಅಭಿಲಕ್ಷ ಲಿಖಿ ನೇತೃತ್ವದ ತಂಡವು ಪ್ರಗತಿಪರ ರೈತನ ಡ್ರ್ಯಾಗನ್ ಫ್ರೂಟ್, ಸೇಬು, ಲಾಂಗಾವ್, ದಾಳಿಂಬೆ ತೋಟಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯಿತು.

ಕೊಳವೆಬಾವಿ ವೈಫಲ್ಯ, ಅಂತರ್ಜಲ ಮಟ್ಟ ಕುಸಿತ ಸೇರಿ ಹಲವು ಸಮಸ್ಯೆಗಳ ನಡುವೆಯೂ ದ್ರಾಕ್ಷಿ, ರೇಷ್ಮೆ, ಹಾಲು ಉತ್ಪಾದನೆಯಲ್ಲಿ ಅವಿಭಜಿತ ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಯು ಮುಂಚೂಣಿಯಲ್ಲಿದೆ. ಈ ಹಿಂದೆ ಒಳ್ಳೆಯ ಬೆಳೆಗಳನ್ನು ಬೆಳೆದು ಆರ್ಥಿಕ ಪ್ರಗತಿ ಸಾಧಿಸಿದ್ದು ನುರಿತ ತಜ್ಞರ ಮಾರ್ಗದರ್ಶನವನ್ನು ಪಡೆದುಕೊಂಡು ಆಧುನಿಕ ತಂತ್ರಜ್ಞಾನವನ್ನು ಬಳಸಿ ಡ್ರ್ಯಾಗನ್ ಫ್ರೂಟ್ ಬೆಳೆಯಲಾಗುತ್ತಿದೆ. ಉತ್ತಮ ಇಳುವರಿಯಿಂದ ಒಳ್ಳೆಯ ಆದಾಯ ಸಿಗುವ ನಿರೀಕ್ಷೆ ಇದೆ ಎಂದು ರೈತ ನಾರಾಯಣಸ್ವಾಮಿ ಸಂತಸ ವ್ಯಕ್ತಪಡಿಸಿದರು.



ಚಿಕ್ಕಬಳ್ಳಾಪುರ ತಾಲೂಕಿನ ಮರಳುಕುಂಟೆಯಲ್ಲಿನ ರೈತ ನಾರಾಯಣಸ್ವಾಮಿಯ ಡ್ರ್ಯಾಗನ್ ಫ್ರೂಟ್ ತೋಟಕ್ಕೆ ಬುಧವಾರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಡಾ. ಅಭಿಲಕ್ಷ ಲಿಖಿ ಭೇಟಿ ನೀಡಿದರು. ಬೆಂಗಳೂರಿನ ಲಾಲ್‌ಬಾಗ್‌ನ ಹೆಚ್ಚುವರಿ ನಿರ್ದೇಶಕ ಪರಶಿವ ಮೂರ್ತಿ, ಜಂಟಿ ನಿರ್ದೇಶಕ ಎನ್. ಪ್ರಸಾದ್ ಮತ್ತಿತರರಿದ್ದರು.

ಕೃಷಿಯ ಅಭಿವೃದ್ಧಿಗಾಗಿ ಸರ್ಕಾರದಿಂದ ಹೆಚ್ಚಿನ ಸವಲತ್ತುಗಳನ್ನು ಒದಗಿಸಬೇಕಾಗಿರುವುದು ಅಗತ್ಯವಿದೆ. ಪ್ರೋತ್ಸಾಹದಾಯಕ ಕ್ರಮಗಳಿಂದ ಅನ್ನದಾತ ರೈತರ ಕಲ್ಯಾಣಕ್ಕೆ ಶ್ರಮಿಸಬೇಕಾಗಿದೆ. ನೀರು, ವಿದ್ಯುತ್, ಮಾರುಕಟ್ಟೆ ಸಮಸ್ಯೆ ಕಾಡುತ್ತಿದೆ. ಇವುಗಳನ್ನು ಪ್ರಾಮಾಣಿಕವಾಗಿ ಬಗೆಹರಿಸುವ ಕೆಲಸವಾಗಬೇಕಾಗಿದೆ ಎಂದು ಮನವಿ ಮಾಡಿದರು.

ವಿವಿಧ ರಾಜ್ಯಗಳಲ್ಲಿ 4,133 ಹೆಕ್ಟೇರ್ ಪ್ರದೇಶಕ್ಕೆ ಡ್ರ್ಯಾಗನ್ ಬೆಳೆಯನ್ನು ವಿಸ್ತರಿಸುವ ಗುರಿಯನ್ನು ಹೊಂದಲಾಗಿದೆ ಎಂದು ಅಭಿಲಕ್ಷ ಲಿಖಿ ತಿಳಿಸಿದರು.

14-07-2022 Vv Pg 5B

ಕೃಷಿ, ತೋಟಗಾರಿಕಾ ಸಚಿವರ ಸಮ್ಮೇಳನ

ಯಶವಂತಪುರದ ತಾಜ್ ಹೋಟೆಲ್‌ನಲ್ಲಿ ಇಂದು ಆರಂಭ

ಬೆಂಗಳೂರು: ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಗುರುವಾರ ದಿಂದ (ಜು.14) ಎರಡು ದಿನ ಯಶವಂತಪುರದ ತಾಜ್ ಹೋಟೆಲ್ ನಲ್ಲಿ ರಾಜ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳ ರಾಷ್ಟ್ರೀಯ ಸಮ್ಮೇಳನ ಆಯೋಜಿಸಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ನಡೆಯುತ್ತಿರುವ ಸಮ್ಮೇಳನದಲ್ಲಿ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್, ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮತ್ತು ಕೃಷಿ, ತೋಟಗಾರಿಕೆ ಮಂತ್ರಿ ಕೈಲಾಶ್ ಚೌಧರಿ ಭಾಗವಹಿಸಲಿದ್ದಾರೆ.

ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಮುಂದಿನ ಹಂತದ ಕ್ರಾಂತಿ ಮಾಡಲು 'ಇ-ನಾಮ್' ಅಡಿಯಲ್ಲಿ ಪ್ಲಾಟ್‌ಫಾರ್ಮ್ ಆಫ್ ಪ್ಲಾಟ್ ಫಾರ್ಮ್‌ಗಳ (ಪಿಒಪಿ) ಮೂಲಕ ಎಲ್ಲ ಪಾಲುದಾರರ ಭಾಗ ವಹಿಸುವಿಕೆಗಾಗಿ ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ. ಇದು ದೇಶದ ರೈತರು ಉತ್ಪನ್ನಗಳನ್ನು ತಮ್ಮ ರಾಜ್ಯದಿಂದ ಹೊರಗೆ ಮಾರಾಟ ಮಾಡಲು ಅನುಕೂಲ ಮಾಡಿಕೊಡಲಿದೆ. ಬಹುಸಂಖ್ಯೆಯ ಮಾರುಕಟ್ಟೆ, ಖರೀದಿದಾರರು, ಸೇವಾ ಪೂರೈಕೆದಾರರಿಗೆ ಡಿಜಿಟಲ್ ಮೂಲಕ ರೈತರ ಭಾಗವಹಿಸುವಿಕೆ ಹೆಚ್ಚಿಸುತ್ತದೆ. ರೈತರು ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯಲು, ಕೃಷಿ ಉತ್ಪನ್ನಗಳ ವ್ಯಾಪಾರ ಮತ್ತು ಮಾರುಕಟ್ಟೆ ಉತ್ತೇಜಿಸಲು ಇ-ನಾಮ್ ಪ್ಲಾಟ್‌ಫಾರ್ಮ್ ವೇದಿಕೆ ಪ್ರಾರಂಭಿಸುವುದು ಸಮ್ಮೇಳನದ ಉದ್ದೇಶಗಳಲ್ಲಿ ಒಂದಾಗಿದೆ.

14-07-2022 Kp Pg 08

ಡ್ರ್ಯಾಗನ್ ಫ್ರೂಟ್ ತೋಟಕ್ಕೆ ಕೇಂದ್ರ ತಂಡ

ಚಿಕ್ಕಬಳ್ಳಾಪುರ ರೈತನ 'ಕಮಲಂ ಹಣ್ಣು' ಕೃಷಿ | ಯಶಸ್ಸಿನ ಮಾಹಿತಿ ಪಡೆದ ಕೇಂದ್ರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಚಿಕ್ಕಬಳ್ಳಾಪುರ ಜಿಲ್ಲೆಯ ಮರಳಕುಂಟೆಯ ನಾರಾಯಣಸ್ವಾಮಿ ಅವರ ಡ್ರ್ಯಾಗನ್ ಫ್ರೂಟ್ ತೋಟಕ್ಕೆ ಕೇಂದ್ರ ತಂಡ ಬುಧವಾರ ಭೇಟಿ ನೀಡಿ ರೈತರೊಂದಿಗೆ ಸಂವಾದ ನಡೆಸಿತು. ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಡಾ.ಅಭಿಲಾಶ್ ಲಿಖಿ ಅವರು ಡ್ರ್ಯಾಗನ್ ಫ್ರೂಟ್ (ಕಮಲಂ ಹಣ್ಣು) ತೋಟಕ್ಕೆ ಭೇಟಿ ನೀಡಿ ಫಸಲನ್ನು ವೀಕ್ಷಿಸಿ ರೈತರ ಜೊತೆ ಬೆಳೆಗೆ ಸಂಬಂಧಿಸಿದ ಮಾಹಿತಿ ವಿನಿಮಯ ಮಾಡಿಕೊಂಡರು.



ಬಳಿಕ ಮಾತನಾಡಿದ ಅಭಿಲಾಶ್ ಲಿಖಿ, 'ಭಾರತದಲ್ಲಿ ಕಮಲಂ ಹಣ್ಣು ಅಥವಾ ಡ್ರ್ಯಾಗನ್ ಫ್ರೂಟ್ ಬೆಳೆಯುವವರ ಸಂಖ್ಯೆ ಸೀಮಿತವಾಗಿದೆ.ಕರ್ನಾಟಕ,ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ಛತ್ತೀಸ್‌ಗಢ, ಒಡಿಶಾ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪ, ಮಿಜೋರಾಂ ಮತ್ತು ನಾಗಾಲ್ಯಾಂಡ್‌ನಲ್ಲಿ ಈ ಫಲವನ್ನು ಬೆಳೆಯಲಾಗುತ್ತದೆ. ದೇಶದಲ್ಲಿ ಒಟ್ಟಾರೆ ಸುಮಾರು 3 ಸಾವಿರ ಹೆಕ್ಟೇರ್‌ನಲ್ಲಿ ಮಾತ್ರ ಫಸಲು ಇದೆ' ಎಂದು ತಿಳಿಸಿದರು.

'ತೋಟಗಾರಿಕೆಯ ಸಮಗ್ರ ಅಭಿವೃದ್ಧಿ ಅಭಿಯಾನ ಯೋಜನೆಯಡಿ 2021-22 ನೇ ಸಾಲಿನಲ್ಲಿ ಕಮಲಂ ಬೆಳೆಯುವ ಪ್ರದೇಶದ ವಿಸ್ತರಣಾ ಚಟುವಟಿಕೆಯನ್ನು ವಿವಿಧ ರಾಜ್ಯಗಳಲ್ಲಿ 4,133 ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಿಸುವ ಗುರಿ ಹೊಂದಲಾಗಿತ್ತು. ಆನುಮೋದಿತ ಕಾರ್ಯಕ್ರಮಗಳನ್ನು ಮಿಜೋರಂ, ನಾಗಾಲ್ಯಾಂಡ್, ಛತ್ತೀಸ್‌ಗಢ, ಗುಜರಾತ್, ಕರ್ನಾಟಕ, ಅಸ್ಸಾಂ, ಆಂಧ್ರಪ್ರದೇಶ ಮತ್ತು ಮಣಿಪುರಗಳಲ್ಲಿ ಜಾರಿ ಮಾಡಲಾಗಿದೆ' ಎಂದರು.

14-07-2022 Vv Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಒತ್ತಾಯ

ಧಾನ್ಯಗಳಿಗೆ ತೆರಿಗೆ ಸದ್ಯಕ್ಕೆ ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಯಾಕ್ ಮಾಡಿರುವ, ಲೇಬಲ್ ಇರುವ ಆಹಾರ ಧಾನ್ಯಗಳ ಮೇಲೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಶೇಕಡ 5ರಷ್ಟು ತೆರಿಗೆ ವಿಧಿಸುವ ಶಿಫಾರಸನ್ನು ತಕ್ಷಣಕ್ಕೆ ಅನುಷ್ಠಾನಗೊಳಿಸಬಾರದು ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಒತ್ತಾಯಿಸಿದೆ.

ಪ್ಯಾಕ್ ಮಾಡಿರುವ, ಲೇಬಲ್ ಇರುವ ಗೋಧಿ ಹಿಟ್ಟು ಸೇರಿದಂತೆ ಹಲವು ಆಹಾರ ಧಾನ್ಯಗಳನ್ನು ಶೇ 5ರ ತೆರಿಗೆ ವ್ಯಾಪ್ತಿಗೆ ತರಲು ಜಿಎಸ್‌ಟಿ ಮಂಡಳಿಯು ಈಚೆಗೆ ನಡೆದ ಸಭೆಯಲ್ಲಿ ಶಿಫಾರಸು ಮಾಡಿದೆ.



ಇದು ಸೋಮವಾರದಿಂದ (ಜುಲೈ 18) ಜಾರಿಗೆ ಬರಬೇಕಿದೆ. ಜಿಎಸ್‌ಟಿ ಅಡಿಯಲ್ಲಿ ಈವರೆಗೆ ಬ್ರ್ಯಾಂಡೆಡ್ ಆಹಾರ ವಸ್ತುಗಳಿಗೆ ಮಾತ್ರ ತೆರಿಗೆ ವಿಧಿಸಲಾಗುತ್ತಿತ್ತು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಫ್‌ಕೆಸಿಸಿಐ ಅಧ್ಯಕ್ಷ ಡಾ.ಐ.ಎಸ್. ಪ್ರಸಾದ್, 'ಪ್ಯಾಕ್ ಮಾಡಿರುವ, ಲೇಬಲ್ ಅಂಟಿಸಿರುವ ಧಾನ್ಯಗಳಿಗೆ ತೆರಿಗೆ ವಿಧಿಸುವುದರಿಂದ

ಜಿಎಸ್‌ಟಿ ವಿಧಿಸುವುದನ್ನು ವಿರೋಧಿಸಿ ರಾಜ್ಯದ ವರ್ತಕರು ಜುಲೈ 15ರಂದು ನಡೆಸುವ ಬಂದ್‌ಗೆ ಕರ್ನಾಟಕ ರಾಜ್ಯ ರೈತ ಸಂಘದ ಬೆಂಬಲವಿದೆ

ಚಾಮರಸ ಮಾಲಿಪಾಟೀಲ
ರಾಜ್ಯ ರೈತ ಸಂಘದ ಗೌರವಾಧ್ಯಕ್ಷ

ರೈತರಿಗೆ ಹಾಗೂ ವರ್ತಕರಿಗೆ ಅನಗತ್ಯ ಹೊರೆಯಾಗುತ್ತದೆ. ಹೀಗಾಗಿ, ಈ ತೆರಿಗೆಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸುವುದನ್ನು ಮುಂದಕ್ಕೆ ಹಾಕಬೇಕು' ಎಂದು ಒತ್ತಾಯಿಸಿದರು.

ಆಹಾರ ವಸ್ತುಗಳ ಮೇಲಿನ ಈ ತೆರಿಗೆಯ ಸಾಧಕ, ಬಾಧಕ ಅಧ್ಯಯನ ನಡೆಸಿದ ನಂತರವಷ್ಟೇ ಅನುಷ್ಠಾನಕ್ಕೆ ತರಬೇಕು ಎಂದು ಅಭಿಪ್ರಾಯಪಟ್ಟರು.

ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆ ಇದ್ದಾಗ ಆಹಾರ ವಸ್ತುಗಳಿಗೆ ತೆರಿಗೆ ವಿನಾಯಿತಿ ಇತ್ತು. ಈಗ ಧಾನ್ಯಗಳಿಗೆ ತೆರಿಗೆ ವಿಧಿಸುವುದರಿಂದ ಆಹಾರ ವಸ್ತುಗಳ ಮೇಲಿನ ಹಣದುಬ್ಬರದ ಮೇಲೆ ಯಾವ ಬಗೆಯ ಪರಿಣಾಮ ಉಂಟಾಗಬಹುದು ಎಂಬುದನ್ನು ಪರಿಶೀಲಿಸಬೇಕಿದೆ ಎಂದು ಎಫ್‌ಕೆಸಿಸಿಐ ಪದಾಧಿಕಾರಿ ಬಿ.ಟಿ. ಮನೋಹರ್ 'ಪ್ರಜಾವಾಣಿ'ಗೆ ವಿವರಿಸಿದರು.

ಪ್ಯಾಕ್ ಮಾಡಿರುವ, ಲೇಬಲ್ ಇರುವ ಎಷ್ಟು ತೂಕದ ಆಹಾರ ವಸ್ತುಗಳಿಗೆ ತೆರಿಗೆ ವಿಧಿಸಲಾಗುತ್ತದೆ, ನಿರ್ದಿಷ್ಟ ಪ್ರಮಾಣಕ್ಕಿಂತ ಕಡಿಮೆ ತೂಕದ ಪ್ಯಾಕ್‌ಗೆ ತೆರಿಗೆ ವಿನಾಯಿತಿ ಇರಲಿದೆಯೇ ಎಂಬುದು ಸ್ಪಷ್ಟವಾಗಬೇಕಿದೆ ಎಂದು ಅವರು ವಿವರಿಸಿದರು.

14-07-2022
Pv Pg 07

ಮುಂಗಾರು ಹಂಗಾಮು
ಆಹಾರ ಧಾನ್ಯ ಬಿತ್ತನೆಗೆ ನಿರಾಸಕ್ತಿ



ಪ್ರಜಾವಾಣಿ ವಾರ್ತೆ

ಕರ್ನಾಟಕದಲ್ಲಿ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗಿದೆ ಎಂದು ಹವಾಮಾನ ಇಲಾಖೆಯ ದತ್ತಾಂಶಗಳು ತಿಳಿಸಿವೆ. ಅಣೆಕಟ್ಟೆಗಳು, ಕೆರೆಗಳಿಗೆ ಯಥೇಚ್ಛ ನೀರು ಹರಿದು ಬಂದಿದೆ. ಹಲವು ಜಲಾಶಯಗಳು ತುಂಬುವ ಹಂತಕ್ಕೆ ಬಂದಿವೆ. ಆದರೆ, ಈ ಸಾಲಿನಲ್ಲಿ ಆಹಾರ ಧಾನ್ಯಗಳ ಬಿತ್ತನೆಯಲ್ಲಿ ವಿಳಂಬವಾಗಿದೆ. 2021ರ ಮುಂಗಾರು ಹಂಗಾಮಿಗೆ ಹೋಲಿಸಿದರೆ, ಈ ಸಾಲಿನ ಮುಂಗಾರು ಹಂಗಾಮಿನಲ್ಲಿ ಆಹಾರ ಧಾನ್ಯಗಳ ಬಿತ್ತನೆ ಪ್ರದೇಶದ ಗುರಿಯನ್ನು ಭಾರಿ ಪ್ರಮಾಣದಲ್ಲಿ ಹಿಚ್ಚಿಸಲಾಗಿತ್ತು. ಕೃಷಿ ಇಲಾಖೆಯು ತನ್ನ ಗುರಿಯನ್ನು ಹಿಚ್ಚಿಸಿಕೊಂಡಿದ್ದರೂ, ರೈತ ಸಮುದಾಯವು ಆಹಾರ ಧಾನ್ಯಗಳ ಬಿತ್ತನೆಗೆ ಹಿಚ್ಚಿನ ಆಸಕ್ತಿಯನ್ನು ತೋರಿಸಿಲ್ಲ.

ಎಣ್ಣೆಕಾಳುಗಳು ಮತ್ತು ವಾಣಿಜ್ಯ ಬೆಳೆಗಳಾದ ಹತ್ತಿ, ಕಬ್ಬು ಬಿತ್ತನೆ ಪ್ರದೇಶದ ವ್ಯಾಪ್ತಿಯನ್ನು ಈ ಸಾಲಿನಲ್ಲಿ ಕಡಿಮೆ ಮಾಡಲಾಗಿತ್ತು.ಆದರೆ, ವಾಣಿಜ್ಯ ಬೆಳೆಗಳು ಮತ್ತು ಎಣ್ಣೆಕಾಳುಗಳ ಬಿತ್ತನೆಯಲ್ಲಿ ಗಣನೀಯ ಪ್ರಗತಿ ಸಾಧಿಸಲಾಗಿದೆ. ಈ ಸ್ವರೂಪದ ವಾಣಿಜ್ಯ ಬೆಳೆಗಳ ಬಿತ್ತನೆ ಕಾರ್ಯಕ್ಕೆ ರೈತ ಸಮುದಾಯವು ತೀವ್ರ ಆಸಕ್ತಿ ತೋರಿಸಿದೆ. ಹಿಂದಿನ ಸಾಲಿನ ಮುಂಗಾರು ಹಂಗಾಮಿಗೆ ಹೋಲಿಸಿದರೆ, ಈ ಸಾಲಿನ ಮುಂಗಾರು ಹಂಗಾಮಿನಲ್ಲಿ ಈ ಬೆಳೆಗಳ ಬಿತ್ತನೆ ಕಾರ್ಯ ಚುರುಕಾಗಿದೆ.

ಬಿತ್ತನೆ ಗುರಿ ಮತ್ತು ಪ್ರಗತಿ ಲಕ್ಷ ಹೆಕ್ಟೇರ್‌ಗಳಲ್ಲಿ



68.12 ಲಕ್ಷ ಹೆಕ್ಟೇರ್
ಈ ಸಾಲಿನ ಮುಂಗಾರು ಹಂಗಾಮಿನಲ್ಲಿ ಆಹಾರ ಧಾನ್ಯ ಮತ್ತು ಎಣ್ಣೆಕಾಳುಗಳ ಬಿತ್ತನೆ ಗುರಿ

114.80 ಲಕ್ಷ ಟನ್
ಈ ಸಾಲಿನ ಮುಂಗಾರು ಹಂಗಾಮಿನಲ್ಲಿ ಆಹಾರ ಧಾನ್ಯಗಳ ಇಳುವರಿ ಗುರಿ

8.70 ಲಕ್ಷ ಟನ್
ಈ ಸಾಲಿನ ಮುಂಗಾರು ಹಂಗಾಮಿನಲ್ಲಿ ಎಣ್ಣೆಕಾಳುಗಳ ಇಳುವರಿ ಗುರಿ

377.99 ಲಕ್ಷ ಟನ್
ಈ ಸಾಲಿನ ಮುಂಗಾರು ಹಂಗಾಮಿನಲ್ಲಿ ಕಬ್ಬಿನ ಇಳುವರಿ ಗುರಿ

18.42 ಲಕ್ಷ ಬೇಲ್‌ಗಳು
ಈಸಾಲಿನ ಮುಂಗಾರು ಹಂಗಾಮಿನಲ್ಲಿ ಹತ್ತಿ ಇಳುವರಿ ಗುರಿ

ರಸಗೊಬ್ಬರ

26.76 ಲಕ್ಷ ಟನ್
ಈ ಸಾಲಿನ ಮುಂಗಾರು ಹಂಗಾಮಿಗೆ ಅಗತ್ಯವಿರುವ ಒಟ್ಟು ರಸಗೊಬ್ಬರ

11.70 ಲಕ್ಷ ಟನ್
ಜುಲೈ ಮೊದಲ ವಾರದ ವೇಳೆಗೆ ರೈತರಿಗೆ ವಿತರಿಸಲಾಗಿರುವ ರಸಗೊಬ್ಬರ

6.56 ಲಕ್ಷ ಟನ್ ರಾಜ್ಯದಲ್ಲಿ
ಲಭ್ಯವಿರುವ ರಸಗೊಬ್ಬರ

8.50 ಲಕ್ಷ ಟನ್
ಇನ್ನೂ ಪೂರೈಕೆಯಾಗಬೇಕಿರುವ ರಸಗೊಬ್ಬರ



ಏಕದಳ ಧಾನ್ಯ: ತುಸು ಕಡಿಮೆ

ಈ ಬಾರಿಯ ಮುಂಗಾರು ಹಂಗಾಮಿನಲ್ಲಿ 35.98 ಲಕ್ಷ ಹೆಕ್ಟೇರ್‌ಗಳಲ್ಲಿ ಏಕದಳ ಧಾನ್ಯಗಳ ಬಿತ್ತನೆ ಆಗಬಹುದು ಎಂದು ರಾಜ್ಯ ಕೃಷಿ ಇಲಾಖೆಯು ಅಂದಾಜಿಸಿದೆ. 2021ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 31.37 ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆ ಗುರಿ ಹಾಕಿಕೊಳ್ಳಲಾಗಿತ್ತು. 2021ರ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಗುರಿಯ ಶೇ 38.23ರಷ್ಟು ಬಿತ್ತನೆ ಕಾರ್ಯ ಪೂರ್ಣಗೊಂಡಿತ್ತು. ಆದರೆ, ಈ ಸಾಲಿನ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಗುರಿಯ ಶೇ 31ರಷ್ಟನ್ನು ಮಾತ್ರ ಬಿತ್ತನೆ ಮಾಡಲಾಗಿದೆ.



ದ್ವಿದಳ ಧಾನ್ಯ: ತೀರಾ ಕಡಿಮೆ

2021ರ ಮುಂಗಾರು ಹಂಗಾಮಿಗೆ ಹೋಲಿಸಿಕೊಂಡರೆ, 2022ರ ಮುಂಗಾರು ಹಂಗಾಮಿನಲ್ಲಿ ದ್ವಿದಳ ಧಾನ್ಯಗಳ ಬಿತ್ತನೆಯ ಗುರಿಯನ್ನು ಹೆಚ್ಚಿಸಿಕೊಳ್ಳಲಾಗಿದೆ. 2021ರ ಜುಲೈ ಮೊದಲ ವಾರದ ವೇಳೆಗೆ, ಮುಂಗಾರು ಹಂಗಾಮಿನ ಒಟ್ಟು ಬಿತ್ತನೆ ಗುರಿಯಲ್ಲಿ ಶೇ 57.62ರಷ್ಟು ಬಿತ್ತನೆ ಕಾರ್ಯ ಪೂರ್ಣಗೊಂಡಿತ್ತು. ಆದರೆ, 2022ರ ಜುಲೈ ಮೊದಲನೇ ವಾರದ ವೇಳೆಗೆ ಒಟ್ಟು ಗುರಿಯ ಶೇ 43ರಷ್ಟು ಬಿತ್ತನೆ ಕಾರ್ಯ ಮಾತ್ರ ಪೂರ್ಣಗೊಂಡಿದೆ.



ಎಣ್ಣೆಕಾಳು: ಶೇ 67ರಷ್ಟು ಪೂರ್ಣ

2021ರ ಮುಂಗಾರು ಹಂಗಾಮಿಗೆ ಹೋಲಿಸಿದರೆ, 2022ರ ಮುಂಗಾರು ಹಂಗಾಮಿನಲ್ಲಿ ಎಣ್ಣೆಕಾಳುಗಳ ಬಿತ್ತನೆ ಪ್ರದೇಶದ ವ್ಯಾಪ್ತಿಯ ಗುರಿಯನ್ನು ಕಡಿಮೆ ಮಾಡಲಾಗಿದೆ. 2021ರ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಬಿತ್ತನೆ ಗುರಿಯ ಶೇ 53.41ರಷ್ಟು ಗುರಿಯನ್ನಷ್ಟೇ ಮುಟ್ಟಲಾಗಿತ್ತು. ಆದರೆ, 2022ರ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಗುರಿಯ ಶೇ 67ರಷ್ಟು ಬಿತ್ತನೆ ಕಾರ್ಯ ಪೂರ್ಣಗೊಂಡಿದೆ.



ಹತ್ತಿ ಬಿತ್ತನೆ: ಹೆಚ್ಚು ಆಸಕ್ತಿ

2022ನೇ ಸಾಲಿನ ಮುಂಗಾರಿನಲ್ಲಿ ರಾಜ್ಯದಲ್ಲಿ ಹತ್ತಿ ಬೆಳೆಯುವ ಪ್ರದೇಶದ ಗುರಿಯನ್ನು ಸ್ವಲ್ಪ ಕಡಿಮೆ ಮಾಡಿಕೊಳ್ಳಲಾಗಿದೆ. 2021ರ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಗುರಿಯ ಶೇ 37ರಷ್ಟು ಬಿತ್ತನೆ ಕಾರ್ಯ ಮಾತ್ರ ಪೂರ್ಣಗೊಂಡಿತ್ತು. ಆದರೆ, 2022ರ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಗುರಿಯ ಶೇ 47ರಷ್ಟು ಬಿತ್ತನೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ.



ಬಿತ್ತನೆ ಬೀಜ

ಈ ಸಾಲಿನ ಮುಂಗಾರು ಹಂಗಾಮಿಗೆ ರಾಜ್ಯದಾದ್ಯಂತ ಒಟ್ಟು 5.38 ಲಕ್ಷ ಕ್ವಿಂಟಲ್‌ಗಳಷ್ಟು ಬಿತ್ತನೆ ಬೀಜದ ಅವಶ್ಯಕತೆ ಇದೆ ಎಂದು ಅಂದಾಜಿಸಲಾಗಿದೆ. ಇದರಲ್ಲಿ 2.37 ಲಕ್ಷ ಕ್ವಿಂಟಲ್‌ಗಳಷ್ಟು ಬಿತ್ತನೆ ಬೀಜವನ್ನು ಈಗಾಗಲೇ ರೈತ ಸಂಪರ್ಕ ಕೇಂದ್ರಗಳ ಮೂಲಕ ವಿತರಣೆ ಮಾಡಲಾಗಿದೆ. ರೈತ ಸಂಪರ್ಕ ಕೇಂದ್ರಗಳಲ್ಲಿ ಇನ್ನೂ 1.53 ಲಕ್ಷ ಕ್ವಿಂಟಲ್‌ನಷ್ಟು ಬಿತ್ತನೆ ಬೀಜದ ದಾಸ್ತಾನು ಇದೆ ಎಂದು ಸರ್ಕಾರವು ತನ್ನ ವರದಿಯಲ್ಲಿ ಹೇಳಿದೆ. ಈ ಸಾಲಿನ ಮುಂಗಾರು ಹಂಗಾಮಿಗೆ ಅಗತ್ಯವಿರುವ ಬಿತ್ತನೆ ಬೀಜದಲ್ಲಿ ಇನ್ನೂ 1.48 ಲಕ್ಷ ಕ್ವಿಂಟಲ್‌ನಷ್ಟು, ರೈತ ಸಂಪರ್ಕ ಕೇಂದ್ರಗಳಿಗೆ ಪೂರೈಕೆಯಾಗಬೇಕಿದೆ.

- 2021ರ ಮುಂಗಾರು ಹಂಗಾಮಿನಲ್ಲಿ ಒಟ್ಟು 77 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ನಿರೀಕ್ಷಿಸಲಾಗಿತ್ತು. ಅದಕ್ಕಾಗಿ 6 ಲಕ್ಷ ಕ್ವಿಂಟಲ್‌ನಷ್ಟು ಬಿತ್ತನೆ ಬೀಜದ ಅವಶ್ಯಕತೆ ಇದೆ ಎಂದು ಅಂದಾಜಿಸಲಾಗಿತ್ತು
- 2022ರ ಮುಂಗಾರು ಹಂಗಾಮಿನಲ್ಲಿ ಒಟ್ಟು 82.67 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ನಿರೀಕ್ಷಿಸಲಾಗಿದೆ. ಅದಕ್ಕಾಗಿ 5.38 ಲಕ್ಷ ಕ್ವಿಂಟಲ್‌ನಷ್ಟು ಬಿತ್ತನೆ ಬೀಜದ ಅವಶ್ಯಕತೆ ಇದೆ ಎಂದು ಅಂದಾಜಿಸಲಾಗಿದೆ
- ಈ ಸಾಲಿನಲ್ಲಿ ಬಿತ್ತನೆ ಪ್ರದೇಶದ ವ್ಯಾಪ್ತಿಯನ್ನು ಹಿಚ್ಚಿಸಿಕೊಂಡಿದ್ದರೂ, ಅಗತ್ಯವಿರುವ ಬಿತ್ತನೆ ಬೀಜದ ಪ್ರಮಾಣದ ಅಂದಾಜನ್ನು ಕಡಿಮೆ ಮಾಡಲಾಗಿದೆ. ರೈತರಿಗೆ ಪೂರೈಕೆಯಾಗಿರುವ ಬಿತ್ತನೆ ಬೀಜದ ಪ್ರಮಾಣವೂ ಕಡಿಮೆ ಇದೆ



ಆಧಾರ: ರಾಜ್ಯ ಕೃಷಿ ಇಲಾಖೆಯ ಮುಂಗಾರು ಹಂಗಾಮು ಸಿದ್ಧತೆಗೆ ಸಂಬಂಧಿಸಿದ ಹವಾಮಾನ ಇಲಾಖೆಯ ಮಾಪನಾಂಕ ಮಳೆ ವರದಿ

ಕಬ್ಬು ಬಿತ್ತನೆ ಶೇ 86ರಷ್ಟು

2022ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಕಬ್ಬು ಬೆಳೆಯುವ ಪ್ರದೇಶದ ಗುರಿಯನ್ನು ಸ್ವಲ್ಪ ಹೆಚ್ಚಿಸಿಕೊಳ್ಳಲಾಗಿದೆ. 2021ರ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಗುರಿಯ ಶೇ 79.28ರಷ್ಟು ಬಿತ್ತನೆ ಕಾರ್ಯ ಮಾತ್ರ ಪೂರ್ಣಗೊಂಡಿತ್ತು. ಆದರೆ, 2022ರ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಗುರಿಯ ಶೇ 86ರಷ್ಟು ಬಿತ್ತನೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಮುಂದಿನ ವಾರಗಳಲ್ಲಿ ಮತ್ತಷ್ಟು ಪ್ರದೇಶದಲ್ಲಿ ಬಿತ್ತನೆ ಕಾರ್ಯ ನಡೆಯುವುದರಿಂದ, ಈ ಸಾಲಿನ ಮುಂಗಾರು ಹಂಗಾಮಿನ ಕಬ್ಬು ಇಳುವರಿ ಹಿಚ್ಚಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.



14-07-2022
Pv Pg 08